ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ನ್ಯಾಯಬೆಲೆ ಅಂಗಡಿಗಳು ವಿತರಿಸಿದ ಆಹಾರ ಪದಾರ್ಥಗಳ ಪ್ರಮಾಣ

578 (1350): ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಎಲ್ಲಾ ನ್ಯಾಯಬೆಲೆ ಅಂಗಡಿಯವರು ಎಪ್ರಿಲ್ 1992ರಿಂದ 30.1.93ರ ವರೆಗೆ ಎಷ್ಟು ಆಹಾರ ಪದಾರ್ಥಗಳನ್ನು ಪಡೆದು ವಿತರಣೆ ಮಾಡಿದ್ದಾರೆ:

ಆ. ಆಹಾರ ಪದಾರ್ಥಗಳನ್ನು ಪಡೆಯದೆ ವಿತರಣೆ ಮಾಡದೆ ಇರುವ ನ್ಯಾಯಬೆಲೆ ಅಂಗಡಿಗಳೆಷ್ಟು:

ಇ. ಆಹಾರ ಪದಾರ್ಥಗಳನ್ನು ಪಡೆಯದ ಇರುವ ನ್ಯಾಯಬೆಲೆ ಅಂಗಡಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಅಕ್ಕಿ 32,622 ಕ್ವಿಂಟಾಲ್
ಗೋಧಿ 9,145 ಕ್ವಿಂಟಾಲ್
ಸಕ್ಕರೆ 5,870 ಕ್ವಿಂಟಾಲ್

ಆ. 8

ಇ. ಸದರಿ 8ನ್ಯಾಯಬೆಲೆ ಅಂಗಡಿಗಳಲ್ಲಿ, ಒಂದನ್ನು ರದ್ದುಪಡಿಸಿದೆ. 4ನ್ಯಾಯಬೆಲೆ ಅಂಗಡಿಗಳನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಮತ್ತು 3 ಅಂಗಡಿಗಳಿಗೆ ಕಾರಣ ಕೇಳುವ ನೋಟೀಸನ್ನು ನೀಡಲಾಗಿದೆ.

ಹೆಚ್.ಕೆ.ಡಿ.ಬಿ.ಯಿಂದ ತೆಗೆದುಕೊಂಡ ರಸ್ತೆ ಕಾಮಗಾರಿಗಳ ವಿವರ

580 (1355): ಶ್ರೀ ಎಂ. ಬಿ. ದಿವಟರ್ (ಕೊಪ್ಪಳ)

ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ರಾಯಚೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ಕೆ. ಸಿ. ಸಿ.ಯಿಂದ ತೆಗೆದುಕೊಂಡ ರಸ್ತೆ ದುರಸ್ತಿ ಕಾಮಗಾರಿಗಳ ವಿವರಗಳನ್ನು ಕೊಡುವುದು ?

ಶ್ರೀ ರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

1. ವಾರಂಪಲ್ಲಿ – ರಾಯಚೂರು ರಸ್ತೆ ದುರಸ್ತಿ
2. ಶ್ರೀರಂಗಪಟ್ಟಣ – ಬೀದರ್ ರಸ್ತೆ 365 ರಿಂದ 475 ಕಿ.ಮೀ.ಗಳು
3. ಲಿಂಗಸುಗೂರು – ಕುಡವಣಿ ರಸ್ತೆ
4. ಸಿಂಧನೂರು – ನರಗುಂದ ರಸ್ತೆ
5. ರಾಯಚೂರು – ಮಾನ್ವಿ ರಸ್ತೆ
6. ರಾಯಚೂರು – ಲಿಂಗಸುಗೂರು ರಸ್ತೆ